ದಿನಾಂಕಃ 24-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>**ಮುಂದುವರೆದ ಮುಖ್ಯ ವಿಚಾರಣೆಃ**</u> ತಕರಾರುದಾರರ ಪರ ಶ್ರೀ ಎಂಆರಬಿ ವಕೀಲರಿಂದ

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ. ಸಾಕ್ಷಿಯು ಹಾಜರುಪಡಿಸಿ ನೋಡಿ ಗುರುತಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಆರ 1 | ಡ ಸಂಖ್ಯೆ 876 ರ ಧೃಡೀಕೃತ ನಕಲು |
| ನಿಆರ 2 | ಎಫಡಿಪಿ ಸಂಖ್ಯೆ10/2022 ರಲ್ಲಿಯ ಆದೇಶ ಪುಟಗಳ ಧೃಡೀಕೃತ ನಕಲು |
| ನಿಆರ 3 | ಎಫಡಿಪಿ ಸಂಖ್ಯೆ10/2022 ರಲ್ಲಿಯ ಅರ್ಜಿಯ ಧೃಡೀಕೃತ ನಕಲು |
| ನಿಆರ 4 | ಓಎಸ ಸಂಖ್ಯೆ 21/2020 ರಲ್ಲಿಯ ತೀರ್ಪು ಮತ್ತು ಡಿಕ್ರಿಯ ಧೃಡೀಕೃತ ನಕಲು |

ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ವಿನಂತಿ ಇರುವುದು.

<u>ಪಾಟಿ ಸವಾಲುಃ-</u> ದರಖಾಸ್ತದಾರರ ಪರ ಶ್ರೀ ಎ ಎ ಜಿ ವಕೀಲರಿಂದ

ಪರಮೇಶ್ವರ ಮಹದೇವಪ್ಪ ಕುಂದಗೋಳ ನನ್ನ ಅಣ್ಣ. ಪ್ರೇಮವ್ವ, ಉಮಾ ಮತ್ತು ರೂಪಾ ನನ್ನ ಅಕ್ಕಂದಿರು. ಪರಮೇಶ್ವರ ಹಾಗೂ ನಾನು ಖಾಸ ಸಹೋದರರು. ನನ್ನ ಹಾಗೂ ಪರಮೇಶ್ವರ ನಡುವೆ ಕುಟುಂಬದ ಆಸ್ತಿಗಳಲ್ಲಿ ಈ ಹಿಂದೆ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಚೌಡಾಳ ಗ್ರಾಮದಲ್ಲಿ ನಮಗೆ ಸೇರಿದ ಒಟ್ಟು 30 ಎಕರೆ ಜಮೀನು ಇದ್ದು ಅವು ನನ್ನ ಹೆಸರಿಗೆ ಮತ್ತು ನನ್ನ ಸಹೋದರ ಸಹೋದರಿಯರ ಹೆಸರಿನಲ್ಲಿ ಜಂಟಿ ಖಾತೆ ಇವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಜಂಟಿ ಖಾತೆ ಬಗ್ಗೆ ದಾಖಲೆ

ಹಾಜರುಪಡಿಸಿಲ್ಲ ಎಂದರೆ ಸರಿ.

2013 ರ ಪೂರ್ವದಲ್ಲಿ ಚೌಡಾಳ ಗ್ರಾಮದ ರಿ ಸ ಸಂಖ್ಯೆ 15 ಕ್ಷೇತ್ರ 14 ಎಕರೆ 38 ಗುಂಟೆ ಜಮೀನು ಪರಮೇಶ್ವರ ಮಹದೇವಪ್ಪ ಕುಂದಗೋಳರವರ ಹೆಸರಿನಲ್ಲಿ ಇತ್ತು ಎಂದರೆ ಸರಿ ಆದರೆ ಅದು ಪಿತ್ರಾರ್ಜಿತ ಜಮೀನು. ಆ ಜಮೀನಿನ ಪೈಕಿ 10 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಪರಮೇಶ್ವರ ಖರೀದಿ ಕರಾರು ಪತ್ರವನ್ನು ಜಾಕೀರಹುಸೇನರವರ ಹೆಸರಿಗೆ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರದ ಪ್ರಕಾರ ಪರಮೇಶ್ವರ ಖರೀದಿ ಪತ್ರ ಬರೆದುಕೊಡದಿರುವ ಕಾರಣ ಜಾಕೀರಹುಸೇನ ಓ.ಎಸ ಸಂಖ್ಯೆ 75/2013 ದಾವೆಯನ್ನು ಪರಮೇಶ್ವರ, ಪ್ರೇಮವ್ವ, ಉಮಾ ಮತ್ತು ರೂಪಾ ರವರ ವಿರುದ್ಧ ಸಲ್ಲಿಸಿ ಡಿಕ್ರಿ ಪಡೆದಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ದಿಃ 26.04.2017 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿ ಇರುವಾಗ ನನ್ನನ್ನು ಅದರಲ್ಲಿ ಸೇರ್ಪಡೆ ಮಾಡಲು ನಾನು ಅರ್ಜಿ ಸಲ್ಲಿಸಲಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಆ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಓ.ಎಸ ಸಂಖ್ಯೆ 75/2013 ರಲ್ಲಿ ಆದಂತಹ ತೀರ್ಪು ಮತ್ತು ಡಿಕ್ರಿ ಪ್ರಶ್ನಿಸಿ ನಾನಾಗಲೀ, ನನ್ನ ಸಹೋದರ, ಸಹೋದರಿಯರಾಗಲೀ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ಏನು ಆದೇಶ ಆಗಿದೆ ಎಂದು ಹೇಳಲು ಆಗುವುದಿಲ್ಲ. ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಹಾಗು ಈ ಪ್ರಕರಣದ ಆಸ್ತಿಗೆ ನಾನು ಸಂಬಂಧಪಡದಿದ್ದರೂ ಸಹ ಸುಳ್ಳು ತಕರಾರು ಮಧ್ಯಂತರ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಓ.ಎಸ ಸಂಖ್ಯೆ 75/2013 ರಲ್ಲಿ ಆಗಲೀ ಅಥವಾ ಈ

ಪ್ರಕರಣದಲ್ಲಾಗಲೀ ಮಧ್ಯಂತರ ಅರ್ಜಿ ಸಂಖ್ಯೆ 4 ಸಲ್ಲಿಸುವ ಮುಂಚೆ ನನ್ನನ್ನು ಸೇರ್ಪಡೆ ಮಾಡಲು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆದಂತಹ ಡಿಕ್ರಿ ಪ್ರಕಾರ ಖರೀದಿ ಪತ್ರ ಬರೆದುಕೊಡಲು ನ್ಯಾಯಾಲಯದಿಂದ ನಿಯೋಗಿ ನೇಮಕ ಆಗಿದ್ದು ಅವರು ದರಖಾಸ್ತದಾರರ ಹೆಸರಿಗೆ ಈ ಪ್ರಕರಣದ ಆಸ್ತಿಗೆ ಸಂಬಂಧಪಟ್ಟಂತೆ ದಿಃ 25.04.2022 ರಂದು ಖರೀದಿ ಪತ್ರ ನೊಂದ್ ಮಾಡಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಖರೀದಿ ಪತ್ರದ ಪ್ರಕಾರ ಎಂಆರ್‌ಹೆಚ್ 59/2021-22 ಆದೇಶ ಆಗಿದ್ದು ಆ ಪ್ರಕಾರ 10 ಎಕರೆ ಜಮೀನಿಗೆ ಜಾಕೀರಹುಸೇನ ಹೆಸರು ದಾಖಲಾಗಿದೆ ಎಂದರೆ ಸುಳ್ಳು ಅದು ಮೋಸದಿಂದ ಮಾಡಲಾಗಿದೆ. ಚೌಡಾಳ ಗ್ರಾಮದ ರಿ ಸ ಸಂಖ್ಯೆ 15/2 ಕ್ಷೇತ್ರ 10 ಎಕರೆ ಜಮೀನಿಗೆ ಜಾಕೀರಹುಸೇನ ಹೆಸರು ದಾಖಲಾಗಿದೆ ಎಂದರೆ ಸರಿ ಆದರೆ ನಮಗೆ ಮಾಹಿತಿ ಇಲ್ಲದೇ ಫೋಡಿ ಮಾಡಲಾಗಿದೆ.

ಪ್ರೇಮವ್ವ, ಉಮಾ ಮತ್ತು ರೂಪಾ ಕೂಡಿಕೊಂಡು ಇದೇ ನ್ಯಾಯಾಲಯದಲ್ಲಿ ಓ.ಎಸ ಸಂಖ್ಯೆ 21/2020 ದಾವೆಯನ್ನು ವಿಭಾಗ ಕೇಳಿ ಪರಮೇಶ್ವರ, ಮಹದೇವಪ್ಪ, ನಿಂಗಪ್ಪ ಹಾಗೂ ನನ್ನ ವಿರುದ್ಧ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆ ದಿಃ 17.01.2022 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಆ ದಾವೆಯಲ್ಲಿಯ ಆಸ್ತಿಗಳು ರಿ ಸ ಸಂಖ್ಯೆ 15, 13/3, 47/1 ಹಾಗೂ 102/1 ಎಂದರೆ ಸರಿ. ಈ ದಾವೆಯಲ್ಲಿ ಜಾಕೀರಹುಸೇನ ರವರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಆಸ್ತಿ ಪರಮೇಶ್ವರರವರ ಕಬ್ಜೆಯಲ್ಲಿ ಇದ್ದು ಸದರಿ ಕಬ್ಜೆ ತಪ್ಪುತ್ತದೆ ಎಂಬ ಉದ್ದೇಶದಿಂದ ನಾವು ಸುಳ್ಳು ಡಿಕ್ರಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಆಸ್ತಿಯ ಕಬ್ಜೆ ತಪ್ಪುತ್ತದೆ ಎಂಬ ಉದ್ದೇಶದಿಂದ ನಾನು ಪರಮೇಶ್ವರವರೊಂದಿಗೆ ಮೀಲಾಪಿಯಾಗಿ ಈ

ಪ್ರಕರಣದಲ್ಲಿ ನನ್ನನ್ನು ಸೇರ್ಪಡೆ ಮಾಡಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿಯ ಪ್ರಕಾರ ನನಗೆ ಕಾನೂನುಬದ್ದವಾದ ಹಕ್ಕು ಪ್ರಾಪ್ತ ಆಗುವುದಿಲ್ಲ ಎಂದರೆ ಸರಿಯಲ್ಲ. ಹಕ್ಕು ಪ್ರಾಪ್ತ ಆಗುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾಖಲೆ ಹಾಜರುಪಡಿಸಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ4 ಸಲ್ಲಿಸುವ ಮುಂಚೆ ನಾನು ಅಥವಾ ನಿಂಗಪ್ಪ ಪ್ರಕರಣದ ಆಸ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಆ ಆಸ್ತಿ ನಮ್ಮದೇ. ದರಖಾಸ್ತದಾರನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ದರಖಾಸ್ತದಾರರ ಪರ ಶ್ರೀ ಎ ಎ ಜಿ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)